ದಿನಾಂಕ 13-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಎನ್.ಎಂ ಎಸ್ ವಕೀಲರಿಂದಃ**

ನಾನು 10 ನೇ ತರಗತಿವರೆಗೂ ವಿದ್ಯಾಭ್ಯಾಸವನ್ನು ಮಾಡಿರುತ್ತೇನೆ. ಈಗ ನಾನು ಸಧ್ಯಕ್ಕೆ ನೇಕಾರ ನಗರ, ಹಳೇ ಹುಬ್ಬಳ್ಳಿ ನಲ್ಲಿ ವಾಸ ಇರುತ್ತೇನೆ. ದಿಃ 12-12-2021 ರಂದು ನನ್ನ ಹಾಗೂ ಅರ್ಜಿದಾರರ ಮದುವೆ ನೀಲಕಂಠೇಶ್ವರ ದೇವಸ್ಥಾನ, ವಾಣಿ ಪ್ಲಾಟ್, ತಿಮ್ಮಸಾಗರ ರೋಡ್, ಹುಬ್ಬಳ್ಳಿಯಲ್ಲಿ ಆಗಿರುತ್ತದೆ. ಮದುವೆ ಸಮಯದಲ್ಲಿ 1 ನೇ ಅರ್ಜಿದಾರರು ವರೋಪಚಾರವಾಗಿ ನನಗೆ ಏನೇನು ಕೊಟ್ಟಿರುತ್ತಾರೆ ಎಂದರೆ ಅವರು ನನಗೆ ಏನೂ ಕೊಟ್ಟಿರುವುದಿಲ್ಲ. ಮದುವೆಯ ಸಮಯದಲ್ಲಿ 1 ನೇ ಅರ್ಜಿದಾರರು ನನಗೆ 10 ಗ್ರಾಂ ಬಂಗಾರ, 50 ಸಾವಿರ ಹಣ ಹಾಗೂ 80 ಸಾವಿರ ಮೌಲ್ಯದ ಬಾಂಡೆ ಸಾಮಾನುಗಳನ್ನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

2. 1 ನೇ ಅರ್ಜಿದಾರರು ಯಾವ ಪರಿಹಾರ ಕೇಳಿ ಸದರಿ ಅರ್ಜಿಯನ್ನು ಸಲ್ಲಿಸಿರುತ್ತಾರೆ ಎಂದರೆ ಜೀವನಾಂಶವನ್ನು ಕೋರಿ ಅವರು ಸದರಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. 2021 ನೇ ಇಸವಿಯಲ್ಲಿ ನಮ್ಮ ಮದುವೆ ಆದ ನಂತರ 1 ನೇ ಅರ್ಜಿದಾರರು ಎಷ್ಟು ದಿನಗಳ ಕಾಲ ನನ್ನ ಜೊತೆ ಬಾಳುವೆ ಮಾಡಿರುತ್ತಾರೆ ಎಂದರೆ 7 ತಿಂಗಳವರೆಗೂ ಮಾತ್ರ ವೈವಾಹಿಕ ಜೀವನವನ್ನು ನಡೆಸಿರುತ್ತಾರೆ. ಈ ಬಗ್ಗೆ ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿ ಬರೆಸಿರುತ್ತೇನೆಯೇ ಎಂದರೆ ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯನ್ನು ಸಲ್ಲಿಸುವ ಸಮಯದಲ್ಲಿ ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ.

3. ನನ್ನ ಕುಟುಂಬದ ತಿಂಗಳ ಖರ್ಚು ಸುಮಾರು 13 ಸಾವಿರದಿಂದ 14 ಸಾವಿರದವರೆಗೂ ಆಗಬಹುದು. 2021 ನೇ ಇಸವಿಯಲ್ಲಿ ನನ್ನ ಹಾಗೂ 1 ನೇ ಅರ್ಜಿದಾರರ ಮದುವೆ ಆದ ನಂತರ ಅವರ ಜವಾಬ್ದಾರಿಯನ್ನು ನೋಡಿಕೊಳ್ಳಲು ನನ್ನ ಕರ್ತವ್ಯ ಆಗಿರುತ್ತದೆ ಎಂದರೆ ಸರಿ. ಮದುವೆ ಸಮಯದಲ್ಲಿ 1 ನೇ ಅರ್ಜಿದಾರರು ನನಗೆ 10 ಗ್ರಾಂ ಬಂಗಾರ, 50 ಸಾವಿರ ನಗದು ಹಣ ಹಾಗೂ 80 ಸಾವಿರ ರೂಗಳ ಬಾಂಡೆ ಸಾಮಾನುಗಳನ್ನು ಕೊಟ್ಟಿದ್ದರೂ ಸಹ ಹೆಚ್ಚಿಗೆ ಹಣ ಬೇಕು ಎಂದು ನಾನು ಅವರಿಗೆ ಮಾನಸಿಕ ಹಿಂಸೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

4. 1 ನೇ ಅರ್ಜಿದಾರರು ಗರ್ಭಿಣಿ ಇದ್ದಾಗ ಅವರಿಗೆ ಯಾವುದೇ ಚಿಕಿತ್ಸೆಯನ್ನು ನೀಡದೇ, ಅವರ ಮೇಲೆ ಹಲ್ಲೇಯನ್ನು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು 1 ನೇ ಅರ್ಜಿದಾರರಿಗೆ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ನೀಡಿ ಅವರ ಕಾಳಜಿಯನ್ನು ವಹಿಸಿಕೊಂಡಿರುತ್ತೇನೆ ಎನ್ನುತ್ತಾರೆ. 1 ನೇ ಅರ್ಜಿದಾರರು ಗರ್ಭಿಣಿ ಇದ್ದಾಗ ನಾನು ಅವರಿಗೆ ಮಾನಸಿಕ ಹಿಂಸೆ ಕೊಟ್ಟಿದ್ದಾಗ ಹಾಗೂ ಹಲ್ಲೇಯನ್ನು ಮಾಡಿದಾಗ ಅವರ ತಂದೆ ತಾಯಿಬಂದು ನನಗೆ ಬುದ್ದಿ ಮಾತನ್ನು ಹೇಳಿದಾಗ ನಾನು ಅವರ ತಂದೆ ತಾಯಿಯ ತಲೆಯ ಮೇಲೆ ಹೆಲ್ಮೆಟ್ ನಿಂದ ಹಲ್ಲೇ ಮಾಡಿರುತ್ತೇನೆ ಎಂದರೆ ಸರಿಯಲ್ಲ.

5. 1 ನೇ ಅರ್ಜಿದಾರರಿಗೆ ನಾನು ಗಂಟಿ ಎಂಬ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಕೊಡಿಸಿರುತ್ತೇನೆ. ಅಲ್ಲಿ ಡಾಃ ರೇಖಾಸ್ತ್ರೀ ರೋಗ ತಜ್ಞರು ಇವರ ಹತ್ತಿರ ತೋರಿಸಿರುತ್ತೇನೆ.

ಸದರಿ ದಾಖಲಾತಿಗಳನ್ನು ನಾನು ಮಾನ್ಯ ನ್ಯಾಯಾಲಯದ ಮುಂದೆ ಹಾಜರುಪಡಿಸಿರುತೇನೆ ಅಥವಾ ಇಲ್ಲ ಎಂದರೆ ಸದರಿ ದಾಖಲಾತಿಗಳನ್ನು 1 ನೇ ಅರ್ಜಿದಾರರು ತಮ್ಮ ಹತ್ತಿರ ಇಟ್ಟುಕೊಂಡಿರುತ್ತಾರೆ. ಗಂಟಿ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಕೊಡಿಸುತ್ತಿರುವಾಗ 1 ನೇ ಅರ್ಜಿದಾರರು ನನ್ನ ಮನೆಯಲ್ಲಿ ವಾಸ ಇದ್ದರು. ಆ ಸಮಯದಲ್ಲಿ ಚಿಕಿತ್ಸೆಗಾಗಿ ಬೇಕಾಗಿರುವ ಎಲ್ಲಾ ದಾಖಲಾತಿಗಳು ಅವರು ಮನೆಯಲ್ಲಿ ಎಲ್ಲಿ ಇಡುತ್ತಿದ್ದರು ಎಂಬ ಬಗ್ಗೆ ಮಾಹಿತಿ ನನಗೆ ಇತ್ತು ಎಂದರೆ ಹೌದು. 1 ನೇ ಅರ್ಜಿದಾರರಿಗೆ ನಾನು ಗಂಟಿ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಕೊಡಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. ಕೀಮ್ಸ ಆಸ್ಪತ್ರೆಯಲ್ಲಿ ನಾನು 2017 ನೇ ಇಸವಿಯಿಂದ ಕೆಲಸ ಮಾಡುತ್ತಿದ್ದೇನೆ. ಪ್ರಸ್ತುತ ಅರ್ಜಿಯನ್ನು 1 ನೇ ಅರ್ಜಿದಾರರು 2023 ನೇ ಇಸವಿಯಲ್ಲಿ ಸಲ್ಲಿಸಿದ್ದು, ಅಲ್ಲಿವರೆಗೂ ಕೀಮ್ಸ ಆಸ್ಪತ್ರೆಯಲ್ಲಿ ನಾನು ಕೆಲಸ ಮಾಡಿ 6 ವರ್ಷ ಆಗಿರುತ್ತವೆ ಎಂದರೆ ಸರಿ. ಇಂದಿಗೂ ಸಹ ನಾನು ಕೀಮ್ಸ ಆಸ್ಪತ್ರೆಯಲ್ಲಿ ರಕ್ತ ತಪಾಸಣಾ ಸಹಾಯಕನಾಗಿ ಕರ್ತವ್ಯವನ್ನು ನಿರ್ವಹಿಸುತ್ತಿದ್ದೇನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾನು ಅಟೆಂಡರ್ ಆಗಿ ಕೆಲಸವನ್ನು ಮಾಡುತ್ತಿದ್ದೇನೆ ಎನ್ನುತ್ತಾರೆ.

7. ರಕ್ತ ತಪಾಸಣಾ ಸಹಾಯಕರಿಗೆ ಮಾಸಿಕವಾಗಿ ರೂ.13 ಸಾವಿರ ಚಿಲ್ಲರೆ ವೇತನ ಇರುತ್ತದೆ. ಸದರಿ ಅರ್ಜಿಗೆ ನಾನು ತಕರಾರನ್ನು ಸಲ್ಲಿಸುತ್ತಿರುವಾಗ ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ. ಸದರಿ ತಕರಾರಿನಲ್ಲಿ ನಾನು ರಕ್ತ ತಪಾಸಣಾ ಸಹಾಯಕನಾಗಿ ಕರ್ತವ್ಯವನ್ನು ಮಾಡುತ್ತಿದ್ದೇನೆ ಎಂದು ಬರೆಸಿರುತ್ತೇನೆ. ತಕರಾರಿನಲ್ಲಿ ನಾನು ರಕ್ತ ತಪಾಸಣಾ

ಸಹಾಯಕನಾಗಿ ಕರ್ತವ್ಯವನ್ನು ಮಾಡುತ್ತಿರುವ ಬಗ್ಗೆ ಬರೆಸಿದ್ದು, ಈಗ ನನು ರಕ್ತ ತಪಾಸಣಾ ಸಹಾಯಕ ಅಟೆಂಡರ್ ಆಗಿ ಕರ್ತವ್ಯವನ್ನು ಮಾಡುತ್ತಿರುವ ಬಗ್ಗೆ ಹೇಳುತ್ತಿದ್ದೇನೆ ಎಂದರೆ ನಾನು ಈ ರೀತಿ ಅಟೆಂಡರ್ ಆಗಿ ಕರ್ತವ್ಯವನ್ನು ಮಾಡುತ್ತಿದ್ದೇನೆ.

8. 2 ನೇ ಅರ್ಜಿದಾರಳು ದಿಃ 08–11–2022 ರಂದು ಹಾವೇರಿಯ ಜಿಲ್ಲಾ ಆಸ್ಪತ್ರೆಯಲ್ಲಿ ಜನಿಸಿರುತ್ತಾರೆ. 2 ನೇ ಅರ್ಜಿದಾರರು ಹುಟ್ಟಿ 9 ತಿಂಗಳು ಆದರೂ ಸಹ ನಾನು ಅವರನ್ನು ನೋಡಲು ಹೋಗಿರುವುದಿಲ್ಲ ಎಂದರೆ ಸರಿಯಲ್ಲ, ಆ ಸಮಯದಲ್ಲಿ ನಾನು, ನನ್ನ ತಂದೆ ತಾಯಿ, ನನ್ನ ಚಿಕ್ಕಪ್ಪ, ಚಿಕ್ಕಮ್ಮ ಹಾಗೂ ಇತರೆ ಸಂಬಂಧಿಕರು ಸೇರಿ ಒಟ್ಟು 17 ಜನ ಹೋಗಿರುತ್ತೇವೆ. ಈ ರೀತಿ ನಾನು, 2 ನೇ ಅರ್ಜಿದಾರರಿಗೆ ನೋಡಲು ಹೋಗಿರುವುದಿಲ್ಲ ಎಂದರೆ ಸರಿಯಲ್ಲ. 2 ನೇ ಅರ್ಜಿದಾರಳು ಹುಟ್ಟಿದ ನಂತರ 1 ನೇ ಅರ್ಜಿದಾರರ ತಂದೆ ತಾಯಿ ಸಾಕಷ್ಟು ಸಲ ಮಗುವನ್ನು ಕರೆದುಕೊಂಡು ಹೋಗಲು ನನಗೆ ತಿಳಿಸಿದ್ದರೂ ಸಹ ನಾನು ಅವರನ್ನು ಕರೆದುಕೊಂಡು ಹೋಗಲು ಬಂದಿರುವುದಿಲ್ಲ ಎಂದರೆ ಸರಿಯಲ್ಲ.

9. ಹುಬ್ಬಳ್ಳಿಯಲ್ಲಿ ನಾನು ಸ್ವಂತ ಅಥವಾ ಬಾಡಿಗೆ ಮನೆಯಲ್ಲಿ ವಾಸವಿದ್ದೇನೆ ಎಂದರೆ ನಾನು ನನ್ನ ಸೋದರ ಮಾವ ಆದ ಸುರೇಶ ಹನುಮಂತಪ್ಪ ಬಡಿಗೇರ ರವರ ಮನೆಯಲ್ಲಿ ಬಾಡಿಗೆಗೆ ವಾಸವಿದ್ದೇನೆ. ನಾನು ಅವರ ಮನೆಯಲ್ಲಿ 2020 ನೇ ಇಸವಿಯಿಂದ ಇಲ್ಲಿವರೆಗೂ ವಾಸ ಇದ್ದೇನೆ. ಆ ಬಗ್ಗೆ ವಿದ್ಯುತ್ ಬಿಲ್ಲುಗಳು ಹಾಗೂ ನೀರಿನ ಬಿಲ್ಲುಗಳನ್ನು ಹಾಜರುಪಡಿಸಿರುತ್ತೇನೆ. ಈ ಬಗ್ಗೆ ನಾನೇದರೂ ಬಾಡಿಗೆ ಕರಾರು ಪತ್ರವನ್ನು

ಮಾಡಿಕೊಂಡಿರುತ್ತೇನೆ ಎಂದರೆ ಇಲ್ಲ. ಸಾಕ್ಷಿಯು ಮುಂದುವರೆದು ಅವರು ನನ್ನ ತಾಯಿಯ ಅಣ್ಣ ಇರುವುದರಿಂದ ಈ ರೀತಿ ಯಾವುದೇ ಬಾಡಿಗೆ ಕರಾರು ಪತ್ರವನ್ನು ಮಾಡಿಕೊಂಡಿರುವುದಿಲ್ಲ.

10. ನನ್ನ ಮುಖ್ಯ ವಿಚಾರಣೆಯಲ್ಲಿ 1 ನೇ ಅರ್ಜಿದಾರಳು ತಮ್ಮ ಹಠಮಾರಿ ಸ್ವಭಾವದಿಂದ ತನ್ನ ತಾಯಿಯ ಜೊತೆ ಶಾಮೀಲಾಗಿ ನನ್ನ ಮೇಲೆ ಹಲ್ಲೇ ಮಾಡಿರುತ್ತಾರೆ ಎಂದು ಬರೆಸಿರುತ್ತೇನೆಯೇ ಹೌದು. ಯಾವ ದಿನಾಂಕದಂದು ಈ ರೀತಿ ದೈಹಿಕ ಹಲ್ಲೇಯನ್ನು ಮಾಡಿರುತ್ತಾರೆ ಎಂದರೆ ದಿನಾಂಕ ಮತ್ತು ಸಮಯ ನನಗೆ ಗೊತ್ತಿಲ್ಲ. 1 ನೇ ಅರ್ಜಿದಾರರು ಹಾಗೂ ಅವರ ತಾಯಿ ನನ್ನ ಜೊತೆ ಯಾವುದೇ ತಂಟೆ ತಕರಾರು ಆಗಲೀ, ದೈಹಿಕ ಹಲ್ಲೇ ಮಾಡದೇ ಇದ್ದರೂ ಸಹ ಅವರ ವಿರುದ್ಧ ಸುಳ್ಳು ಅಪವಾದವನ್ನು ಹೇರಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಬಗ್ಗೆ ಅವರ ವಿರುದ್ಧ ನಾನು ಯಾವುದೇ ಕಾನೂನು ಕ್ರಮ ತೆಗೆದುಕೊಂಡಿರುವುದಿಲ್ಲ.

11. 1 ನೇ ಅರ್ಜಿದಾರಳೇ ನನ್ನ ಮನೆಯಲ್ಲಿದ್ದ ಬಂಗಾರದ ಸಾಮಾನುಗಳನ್ನು ಕಳುವು ಮಾಡಿ ಸ್ವತಃ ನನ್ನ ಮನೆಯನ್ನು ಬಿಟ್ಟು ಹೋಗಿರುವ ನನ್ನ ಪ್ರಮಾಣ ಪತ್ರದಲ್ಲಿ ಬರೆಸಿರುತ್ತೆನೆಯೇ ಎಂದರೆ ಹೌದು. ಈ ಬಗ್ಗೆ 1 ನೇ ಅರ್ಜಿದಾರರ ವಿರುದ್ಧ ಯಾವುದೇ ಕಾನೂನು ಕ್ರಮ ತೆಗೆದುಕೊಂಡಿರುವುದಿಲ್ಲ. ಹುಬ್ಬಳ್ಳಿಯ ಪೊಲಿಸ್ ಠಾಣೆ ಯಲ್ಲಿ ನಾನೇದರೂ 1 ನೇ ಅರ್ಜಿದಾರರ ವಿರುದ್ಧ ದೂರನ್ನು ಸಲ್ಲಿಸಿರುತ್ತೇನೆಯೇ ಎಂದರೆ ದಿಃ 03-08-2023 ರಂದು ಹುಬ್ಬಳ್ಳಿಯ ಮಹಿಳಾ ಪೊಲೀಸ್ ಠಾಣೆಯಲ್ಲಿ 1 ನೇ

ಅರ್ಜಿದಾರರ ವಿರುದ್ದ ದೂರನ್ನು ಸಲ್ಲಿಸಿರುತ್ತೇನೆ. ಸದರಿ ದೂರಿನಲ್ಲಿ 1 ನೇ ಅರ್ಜಿದಾರರು ಹೆರಿಗೆಗೆ ಹೋದ ನಂತರ ವಾಪಾಸ್ಸು ಬಂದಿರುವುದಿಲ್ಲ, ನಾನು ಕರೆಯಲು ಹೋದಾಗ ಅವರು ಹಾಗೂ ಅವರ ಕುಟುಂಬದವರು ನನ್ನ ಮೇಲೆ ದೌರ್ಜನ್ಯ ಮಾಡಿರುತ್ತಾರೆ. ಆದ್ದರಿಂದ 1 ನೇ ಅರ್ಜಿದಾರರು ನನ್ನ ಜೊತೆ ವೈವಾಹಿಕ ಜೀವನವನ್ನು ನಡೆಸಿಕೊಂಡು ಹೋಗಬೇಕು ಎಂದು ಕೋರಿಕೊಂಡಿರುತ್ತೇನೆ. ಈ ರೀತಿ ದೂರಿನಲ್ಲಿ ನನಗೆ ದೈಹಿಕವಾಗಿ ಹಲ್ಲೇ ಮಾಡಿರುವ ಬಗ್ಗೆ ನಾನು ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ.

12. ದಿಃ 05-10-2024 ರಂದು ನಾನು ಯಾರ ಮನೆಯಲ್ಲಿ ವಾಸವಿದ್ದೆ ಎಂದರೆ ಆ ಸಮಯದಲ್ಲಿ 1 ನೇ ಅರ್ಜಿದಾರರ ಸಲುವಾಗಿ ನಾನು ಬೇರೆ ಬಾಡಿಗೆ ಮನೆಯನ್ನು ಮಾಡಿಕೊಂಡಿರುತ್ತೇನೆ. ಆಗ ನಾನು ಶ್ರೀ ಶಿವಾನಂದ ಸುಬೇದಾರರವರ ಮನೆಯಲ್ಲಿ ಬಾಡಿಗೆದಾರನಾಗಿ ವಾಸವಿದ್ದೆ. 1 ನೇ ಅರ್ಜಿದಾರರು ನಾನು ಚಿತ್ರ ಹಿಂಸೆಯನ್ನು ಕೊಟ್ಟಿದ್ದಾಗ ನನ್ನ ಮನೆಯನ್ನು ಬಿಟ್ಟು ಹೋದಾಗ ಅವರನ್ನು ವಾಪಾಸು ಕರೆದುಕೊಂಡು ಬರಲು ಯಾವುದಾದರೂ ಕಾನೂನಿನ ಕ್ರಮ ತೆಗೆದುಕೊಂಡಿರು ತ್ತೇನೆಯೇ ಎಂದರೆ ನಾನು ಅವರಿಗೆ ಯಾವುದೇ ಚಿತ್ರ ಹಿಂಸೆಯನ್ನು ಕೊಟ್ಟಿರುವುದಿಲ್ಲ. ಆ ಸಮಯದಲ್ಲಿ ಅವರು ಡೆಲವರಿಗೆ ಹೋಗಿದ್ದರಿಂದ ಯಾವುದೇ ಕಾನೂನಿನ ಕ್ರಮ ತೆಗೆದುಕೊಂಡಿರುವು ದಿಲ್ಲ.

13. 1 ನೇ ಅರ್ಜಿದಾರರು ಗರ್ಭಿಣಿ ಇದ್ದಾಗ ಅವರು ಕೋರ್ಟಿಗೆ ಅಲೆದಾಡಿಸಬೇಕು ಎಂದು ನಾನು ಹುಬ್ಬಳ್ಳಿಯ ಕೌಟುಂಬಿಕ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಹೌದು. ಸಾಕ್ಷಿಯು ಮುಂದುವರೆದು 2023 ನೇ

ಇಸವಿಯಲ್ಲಿ ಇದೇ ನ್ಯಾಯಾಲಯದಲ್ಲಿ 1 ನೇ ಅರ್ಜಿದಾರರು ನನ್ನ ವಿರುದ್ಧ ಆಪಾದನೆ ಮಾಡಿದ್ದು, ನನ್ನ ಹೆಂಡತಿ ನನ್ನ ಜೊತೆ ವೈವಾಹಿಕ ಜೀವನ ನಡೆಸಬೇಕು ಎಂದು ನಾನು ಹುಬ್ಬಳ್ಳಿಯ ಕೌಟುಂಬಿಕ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತೇನೆ ಎನ್ನುತ್ತಾರೆ.

14. 2023 ನೇ ಇಸವಿಯ ಪೂರ್ವದಲ್ಲಿ ದಾಂಪತ್ಯ ಪುನರ್ ಸ್ಥಾಪನೆಗಾಗಿ ಹುಬ್ಬಳ್ಳಿಯ ಕೌಟುಂಬಿಕ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ. 1 ನೇ ಅರ್ಜಿದಾರರನ್ನು ಹೇಗಾದರೂ ಮಾಡಿ ನ್ಯಾಯಾಲಯಕ್ಕೆ ಅಲೆದಾಡಿಸಬೇಕು ಎಂದು ನಾನು 2024 ನೇ ಇಸವಿಯಲ್ಲಿ ಈ ರೀತಿ ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನಗೆ ನನ್ನ ಹೆಂಡತಿ ಬೇಕು ಎಂದು ನಾನು ಈ ರೀತಿ ಅರ್ಜಿಯನ್ನು ಸಲ್ಲಿಸಿರುತ್ತೇನೆ ಎನ್ನುತ್ತಾರೆ.

15. ನಾನು ಕೀಮ್ಸ್ ಆಸ್ಪತ್ರೆಯಲ್ಲಿ ರಕ್ತ ತಪಾಸಣಾ ಸಹಾಯಕ ಆಗಿ ಕೆಲಸ ಮಾಡುತ್ತಿರುವುದರಿಂದ ನನಗೆ ತಿಂಗಳಿಗೆ 15 ಸಾವಿರ ಸಂಬಳ ಇರುತ್ತದೆ, ಅದೇ ರೀತಿ ಬಾಡಿಗೆ ಮನೆಗಳಿಂದ ನನಗೆ ತಿಂಗಳಿಗೆ 8 ರಿಂದ 10 ಸಾವಿರ ರೂಗಳ ಆದಾಯ ಇರುವುದರಿಂದ 1 ಹಾಗೂ 2 ನೇ ಅರ್ಜಿದಾರರಿಗೆ ಜೀವನಾಂಶವನ್ನು ಕೊಡಲು ನಾನು ಬಾಧ್ಯಸ್ಥನಾಗಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಸಾಕಷ್ಟು ಆದಾಯ ಇದ್ದರೂ ಸಹ ಅರ್ಜಿದಾರರಿಗೆ ಜೀವನಾಂಶ ಕೊಡಲು ನಾನು ಬಾಧ್ಯಸ್ಥನಾಗಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

16. ನಾನು ಹುಬ್ಬಳ್ಳಿಯ ಮಾನ್ಯ ಕೌಟುಂಬಿಕ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿದ್ದು, ಸದರಿ ಆದೇಶದ ಪ್ರಕಾರ ಅರ್ಜಿದಾರರಿಗೆ ನನ್ನ ಜೊತೆ ದಾಂಪತ್ಯ ಜೀವನ

ನಡೆಸಲು 2 ತಿಂಗಳ ಸಮಯವನ್ನು ನೀಡಲಾಗಿರುತ್ತದೆ. ಈ ರೀತಿ ಆದೇಶ ಆದ ನಂತರ 1 ನೇ ಅರ್ಜಿದಾರಳನ್ನು ಕರೆಯಲು ಅವರ ಮನೆಗೆ ಹೋಗಿರುವುದಿಲ್ಲ, ಆದರೆ ನ್ಯಾಯಾಲಯದ ಆವರಣದಲ್ಲಿ ಈ ಬಗ್ಗೆ ಅವರಿಗೆ ಕೇಳಿಕೊಂಡಿರುತ್ತೇನೆ. ನಾನು 1 ನೇ ಅರ್ಜಿದಾರಳಿಗೆ ನ್ಯಾಯಾಲಯದ ಆವರಣದಲ್ಲಿ ಈ ಬಗ್ಗೆ ಕೇಳಿರುವುದಿಲ್ಲ ಎಂದರೆ ಸರಿಯಲ್ಲ. ಈಗಲೂ ಸಹ 1 ಮತ್ತು 2 ನೇ ಅರ್ಜಿದಾರರು ನನ್ನ ಜೊತೆ ಬಂದು ಜೀವನವನ್ನು ನಡೆಸಲು ಸಿದ್ಧ ಆಗಿರುತ್ತಾರೆ ಎಂದರೆ ನನಗೆ ಈ ಬಗ್ಗೆ ಕಾಲವಕಾಶ ಬೇಕು, ನಾನು ನನ್ನ ಗುರುಹಿರಿಯರ ಜೊತೆ ಮಾತನಾಡ ಬೇಕಾಗುತ್ತದೆ. 1 ಮತ್ತು 2 ನೇ ಅರ್ಜಿದಾರರಿಗೆ ಜೀವನಾಂಶ ಕೊಡಲು ಸಂಪೂರ್ಣವಾಗಿ ಬಾಧ್ಯಸ್ಥನಾಗಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.

Sd/–
ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ.

ಸಾಕ್ಷಿದಾರರ ಸಹಿ